**ದಿನಾಂಕಃ 12-3-2020 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲು ಃ ಶ್ರೀ ಆರ್ ವಿ ವಕೀಲರಿಂದ**

1 ನೇ ಪ್ರತಿವಾದಿ ನನಗೆ ತಮ್ಮನಾಗಬೇಕು , ನನಗೂ ಮತ್ತು ಆತನಿಗೂ ಬೇರೊಂದು ಸಿವಿಲ್ ವ್ಯಾಜ್ಯವಿರುತ್ತದೆ . ಸೈಟನ್ನು ತೆಗೆದುಕೊಂಡು ದನಕರು ಕಟ್ಟಿಕೊಂಡಿದ್ದೆನು , ಆ ಕುರಿತು ದಾವೆಯನ್ನು ಸಲ್ಲಿಸಿರುತ್ತೇನೆ. ಸದರಿ ಆಸ್ತಿಯ ಖಾತಾ ನಂಬರ್ 2 ಇರುತ್ತದೆ . ಅದು ಕೃಷ್ಣಗಿರಿಗೆ ಸೇರಿರುತ್ತದೆ. ಸದರಿ ಆಸ್ತಿಯ ಪೂರ್ವ –ಪಶ್ಚಿಮ , ಉತ್ತರ–ದಕ್ಷಿಣ ಇರುವ ಅಳತೆಯನ್ನು ನಾನು ಮಾಡಿಲ್ಲ . ಸದರಿ ನಿವೇಶನ 1 ನೇ ಪ್ರತಿವಾದಿಗೆ ಸೇರಿರುತ್ತದೆ. ಸಾಕ್ಷಿ ಮುಂದುವರೆದು 1 ನೇ ಪ್ರತಿವಾದಿಯು ತನಗೆ ಬಂದ ಹಿಸ್ಸೆ ಸ್ವಂತ ಆಸ್ತಿಯನ್ನು ನನಗೆ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯ ವಿಭಾಗ ಮಾಡಿಕೊಂಡ ದಾಖಲಾತಿಯನ್ನು ಹಾಜರು ಪಡಿಸಿದ್ದೇನೆ , ಸಾಕ್ಷಿ ಮುಂದುವರೆದು ಹಾಜರು ಪಡಿಸಿದ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮೂಲತಃ ದಾವಾ ಆಸ್ತಿ 1 ನೇ ಪ್ರತಿವಾದಿಯ ತಂದೆಯ ತಂದೆಗೆ ಸೇರಿತ್ತು ಎಂದರೆ ಸರಿ .

ಕುರಿಚಿಕ್ಕಣ್ಣನ ತಂದೆಯ ಹೆಸರು ಚಿಕ್ಕಕೆಂಪಯ್ಯ ಇರುತ್ತದೆ , ಚಿಕ್ಕಕೆಂಪಯ್ಯನಿಗೆ ಬೋರಪ್ಪ , ಕುರಿಚಿಕ್ಕಣ್ಣ , ಸಿದ್ದಪ್ಪ ಮತ್ತು ಜೂಲಪ್ಪ ಅಂತ ಮಕ್ಕಳಿದ್ದರು . ದಾವಾ ಆಸ್ತಿ ಚಿಕ್ಕಕೆಂಪಯ್ಯನ ಎಲ್ಲಾ ಮಕ್ಕಳಿಗೂ ಸೇರಿತ್ತು ಎಂದರೆ ಸಾಕ್ಷಿಯು ವಿಭಾಗ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ . ಕುರಿಚಿಕ್ಕಣ್ಣನಿಗೆ ಬೋರಪ್ಪ , ಕೆಂಪಯ್ಯ , ಸಿದ್ದಪ್ಪ ಮತ್ತು ಕೃಷ್ಣಪ್ಪ ಅಂತ ಗಂಡು ಮಕ್ಕಳಿರುತ್ತಾರೆ ಹಾಗೂ 3 ಜನ ಹೆಣ್ಣು ಮಕ್ಕಳಿರುತ್ತಾರೆ , ಆದರೆ ಅವರ ಹೆಸರು ನನಗೆ ಗೊತ್ತಿಲ್ಲ . ಚಿಕ್ಕಕೆಂಪಯ್ಯನ ಮಕ್ಕಳ ನಡುವೆ ಆಸ್ತಿಗಳ ಕುರಿತು ಯಾವುದೇ ವಿಭಾಗ ಆಗಿಲ್ಲ ಎಂದರೆ ಸರಿಯಲ್ಲ . 1 ನೇ ಪ್ರತಿವಾದಿಗೆ ಒಬ್ಬ ಶಿವಣ್ಣ ಅಂತ ಗಂಡು ಮಗನಿದ್ದು , 3 ಜನ ಹೆಣ್ಣು ಮಕ್ಕಳಿರುತ್ತಾರೆ , ಆದರೆ ಅವರ ಹೆಸರು ಗೊತ್ತಿಲ್ಲ . ಸದರಿ 3 ಜನ ಹೆಣ್ಣು ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ .

(ವಕೀಲರು ಮುಂದುವರೆದ ಪಾಟೀಸವಾಲಿಗಾಗಿ ಸಮಯ ಕೋರಿದ್ದರಿಂದ ರೂ.50/- ಖರ್ಚುವಿಧಿಸಿ ಮುಂದೂಡಲಾಯಿತು )

**(**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು**)**

**ಓ ಹೇ ಕೇ ಸರಿ ಇದೆ**

**ಪಿ.ಸಿ.ಜೆ. ಮತ್ತು ಜೆಎಂಎಫ್‌ಸಿ**
**ಪಾವಗಡ.**